**ದಿ.09.02.2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು : ಶ್ರೀ ಎಸ್ ಎಸ್ ಎಂ ವಕೀಲರಿಂದ ಃ ದೂರುದಾರರ ಪರವಾಗಿ**

ನಾನು ಸೊಸೈಟಿಯ ಕಾರ್ಯದರ್ಶಿಯಾಗಿದಾಗ ನನಗೆ ಸೊಸೈಟಿಯ ನಿಯಮಗಳು ಗೊತ್ತಿದ್ದವು ಎಂದರೆ ಸರಿ. ನಾನು ಕಾರ್ಯದರ್ಶಿಯಾಗಿದ್ದಾಗ ಎಷ್ಟು ಜನ ನಿರ್ದೇಶಕರು, ಅಧ್ಯಕ್ಷರು ಆಗಿ ಹೋಗಿರುತ್ತಾರೆ ಎಂದು ನೆನಪಿಲ್ಲ. ನಮ್ಮ ಬೋರ್ಡ್ ಆಫ್ ಡೈರೆಕ್ಟರ್ ಮತ್ತು ನಮ್ಮ ನಡುವೆ ವೈಮನಸ್ಸು ಬಂದರೇ ಜಂಟಿ ನಿರ್ದೇಶಕರಿಗೆ ಅಥವಾ ಎಆರ್ ಸಿ ಎಸ್ ರವರಿಗೆ ದೂರು ನೀಡುತ್ತೇವೆ. ದೂರನ್ನು ಕಲಂ.70 ಕೋ ಆಪರೇಟಿವ್ ಸೊಸೈಟ್ ಅಡಿಯಲ್ಲಿ ನೀಡುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಗೊತ್ತಿದ್ದರು ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಲಂ.70 ರ ಅಡಿಯಲ್ಲಿ ನಾವು ದೂರು ನೀಡಬೇಕಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ನ್ಯಾಯಾಲಯದ ಮುಂದೆ ಒಪ್ಪಿಕೊಂಡರೇ ನನ್ನ ಕೇಸಿಗೆ ಹಾನಿಯಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಸೈಟುಗಳನ್ನು ಯಾರಿಗೆ ಕೊಟ್ಟಿದ್ದೇವು ಎಂದು ನನಗೆ ಈಗ ನೆನಪಿಲ್ಲ. ಒಬ್ಬ ಬೋರ್ಡ್ ಡೈರೆಕ್ಟರ್ ಉಳಿದ ಬೋರ್ಡ್ ಆಫ್ ಡೈರೆಕ್ಟರ್ ಗೆ ಗೊತ್ತಿಲ್ಲದಂತೆ ಯಾರಿಗೆ ಬೇಕೋ ಅವರಿಗೆ ಸೈಟುಗಳನ್ನು ಹಂಚಬಹುದಾ ಎಂದರೆ ಬರುವುದಿಲ್ಲ. ಸದಸ್ಯರಿಗೆ ಮಾತ್ರ ಹಂಚಬಹುದು. ಒಂದೇ ವೇಳೆ ಆ ರೀತಿ ಸೈಟುಗಳನ್ನು ಹಂಚಿದ್ದರೇ ಕಲಂ.70 ರ ಪ್ರಕಾರ ಕ್ರಮ ಕೈಗೊಳ್ಳಬಹುದು ಎಂದರೆ ನನಗೆ ಗೊತ್ತಿಲ್ಲ.

2. ನಾನು ಅಧಿಕಾರದಲ್ಲಿದ್ದಾಗ ಎಷ್ಟು ಸೈಟುಗಳನ್ನು ಹಂಚಿದ್ದೇವೆಯೋ ಎಲ್ಲಾ ಸೈಟುಗಳನ್ನು ನಾನೇ ಸಬ್ ರಿಜಿಸ್ಟರ್ ಕಚೇರಿಗೆ ಹೋಗಿ ನೊಂದಾಣಿ ಮಾಡಿಕೊಟ್ಟಿರುತ್ತೇನೆ. ಸಾಕ್ಷಿ ಮುಂದುವರೆದು ಸೊಸೈಟಿ ಮೂಲಕ ನೊಂದಾಣಿ ಮಾಡಿ ಕೊಡಲಾಗಿದೆ ಎಂದು ನುಡಿಯುತ್ತಾರೆ. ನಾನು ನೀಡಿರುವ ದಾಖಲೆಗಳಲ್ಲಿ ಸೊಸೈಟಿ ಪರವಾಗಿ ಮಾರಾಟ ಮಾಡಲಾಗಿದೆ ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಸಾಮಾನ್ಯ ಸಭೆಗೆ ಎಲ್ಲಾ ಸದಸ್ಯರಿಗೆ ಬರುವಂತೆ ನಾನೇ ನೋಟಿಸ್ ಗಳನ್ನು ಕೊಡುತ್ತೇವೆ ಎಂದರೆ ಸ್ಕ್ರೆಟರಿ ಕೊಡುತ್ತಾರೆ ಎಂದು ಹೇಳುತ್ತಾರೆ.

3. ನಿಪಿ.21 ನ್ನು ಪಣೇಂದ್ರ ಕುಮಾರ್ ಎನ್ನುವವರಿಗೆ ನಾನು , ಹೊನ್ನಗಂಗಯ್ಯ, ರತ್ನಮ್ಮ, ಮಹಾಲಕ್ಷ್ಮಿ, ಸುಜಾತ ಮತ್ತು ಇತರರ ಜೊತೆ ಸೇರಿ ಕ್ರಯ ಪತ್ರ ಬರೆದುಕೊಟ್ಟಿರುತ್ತೇನೆ ಎನ್ನುವುದು ಸರಿ. ಸಾಕ್ಷಿ ಮುಂದುವರೆದು ನಾನು ಎಲ್ಲಾ ಜಾಮೀನುದಾರರ ಪರವಾಗಿ ಜಿಪಿಎ ಪಡೆದುಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ.21 ರಲ್ಲಿ ಸೊಸೈಟಿ ಪರವಾಗಿ ಕೊಟ್ಟಿದ್ದೇನೆ ಎಂದು ಬರೆದಿಲ್ಲ ಎಂದರೆ

ಸರಿ. ಪಲ್ಲವಿ ಇರುವ ನಮ್ಮ ಸೊಸೈಟಿಯ ಸದಸ್ಯರಾಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ.33 ರಲ್ಲಿ ನನ್ನ ಹೆಸರು ಇರುತ್ತದೆ. ನಿಪಿ.21 ಮತ್ತು 33 ಗಳು ಒಂದೇ ದಿನ ಆಗಿರುತ್ತವೆ ಎಂದರೆ ಸರಿ.

4. ಪಲ್ಲವಿ ರವರ ತಂದೆ ಮರಿಯಪ್ಪ ಈ ಪ್ರಕರಣದಲ್ಲಿ ಐದ ನೇ ಆರೋಪಿಯಾಗಿದ್ದರು ಎಂದರೆ ಸರಿ. ಅವರಿಗೂ ಸಹ ಸೈಟುಗಳನ್ನು ನೊಂದಾಣಿ ಮಾಡಲು ಅಧಿಕಾರ ಇತ್ತು ಎನ್ನುವುದು ಸರಿಯಲ್ಲ. ಸಾಮಾನ್ಯ ಸಭೆ ಮತ್ತು ಇತರೆ ದಾಖಲೆಗಳನ್ನು ತರಿಸಲು ಅವರಿಗೂ ಅಧಿಕಾರ ಇರುತ್ತದೆ ಎನ್ನುವುದು ನನಗೆ ಗೊತ್ತಿಲ್ಲ. ಪಲ್ಲವಿಯವರಿಗೆ ಸದಸ್ಯರಲ್ಲದೇ ಇದ್ದರೂ ಸಹ ಮರಿಯಪ್ಪನ ಮಗಳು ಅಂತ ಸೈಟು ಕೊಟ್ಟಿದ್ದು ಅವ್ಯವಹಾರ ಎಂದರೆ ಗೊತ್ತಿಲ್ಲ. ನಮ್ಮ ಸೊಸೈಟಿಯಲ್ಲಿ ಸಾಕಷ್ಟು ಅವ್ಯವಹಾರ ಆಗಿದ್ದರೂ ಸಹ ಇಲ್ಲಿಯವರೆಗೆ ಎಆರ್ ಸಿ ಎಸ್, ಜೆ ಆರ್ ಸಿ ಎಸ್ ಅಥವಾ ಸರ್ಕಾರಕ್ಕೆ ದೂರು ಕೊಟ್ಟಿದ್ದೀರಾ ಎಂದರೆ ನನಗೆ ಗೊತ್ತಿಲ್ಲ.

5. ನನ್ನ ಹೆಂಡತಿಯ ಹೆಸರು ಅನುಸೂಯ ಎಂದರೆ ಸರಿ. ನಮ್ಮ ಸೊಸೈಟಿಯ ನಿಯಮದ ಪ್ರಕಾರ ನಮ್ಮ ಕುಟುಂಬದ ಸದಸ್ಯರಿಗೆ ಅಥವಾ ಮಕ್ಕಳಿಗೆ ಸೈಟು ಹಂಚಿಕೆ ಮಾಡಬಾರದು ಅಂತ ನಿಯಮ ಇದೆ ಎಂದರೆ ಅನುಸೂಯ ರವರು ಸದಸ್ಯರಾಗಿದ್ದು ಅದ್ದರಿಂದ ಅವರಿಗೆ ಸೈಟು ಕೊಟ್ಟಿರುತ್ತೇವೆ. ನಮ್ಮ ಸೊಸೈಟಿ ಪರವಾಗಿ ಅನುಸೂಯ ರವರಿಗೆ ಸೈಟ್ ಕೊಡಲಾಗಿದೆ ಎಂದು ನಿಪಿ.22 ರಲ್ಲಿ ಬರೆದಿಲ್ಲ ಎಂದರೆ ಸರಿ. ಈ ಮೇಲೆ ಹೇಳಿದ ದಾಖಲೆಗಳ ಪ್ರಕಾರ ನಾವು ಸದಸ್ಯರಿಗೆ ಸೈಟು ಹಂಚಿಕೆ ಮಾಡುತ್ತಿರಲಿಲ್ಲ ಅಕ್ರಮವಾಗಿ ರಿಯಲ್ ಎಸ್ಟೇಟ್ ದಂಧೆ ಮಾಡುತ್ತಿದ್ದೇವು ಎಂದರೆ ಸರಿಯಲ್ಲ. ಸೊಸೈಟಿ ಪರವಾಗಿ ಎಷ್ಟು ಜನರಿಗೆ ಸೈಟ್ ಕೊಟ್ಟಿರುತ್ತೇವೆ ಎಂದು ನನಗೆ ಗೊತ್ತಿರುವುದಿಲ್ಲ.

6. ನಿಪಿ.39 ರಲ್ಲಿ ಸೊಸೈಟಿಯಿಂದ ಸದಸ್ಯರಿಗೆ ಯಾವುದೇ ಸೈಟು ಹಂಚಿಕೆ ಮಾಡಿಲ್ಲ ಅಂತ ದೃಡಿಕರಣ ಪತ್ರ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಡೈರೆಕ್ಟರ್ ಗಳು ಎಲ್ಲಾರುಸೇರಿ ಸೀತಾರಾಮರವರಿಗೆ ಸದಸ್ಯರಲ್ಲದೇ ಇದ್ದರೂ ಸಹ ಸದಸ್ಯತ್ವ ಕೊಟ್ಟಿದ್ದಾರೆ ಎಂದು ದೂರು ಕೊಟ್ಟಿದ್ದೀರಾ ಎಂದರೆ ನನಗೆ ಗೊತ್ತಿಲ್ಲ. ಸದಸ್ಯತ್ವದ ಫೀ ಕೊಟ್ಟಾಗ ರಸೀದಿ ಕೊಟ್ಟು ಕಚೇರಿಗಾಗಿ ಎಷ್ಟು ರಸೀದಿ ಇಟ್ಟುಕೊಳ್ಳುತ್ತಿದ್ದೀರಿ ಎಂದರೆ ನನಗೆ ಗೊತ್ತಿಲ್ಲ. ಗಣಕೀಕೃತ ಆಗುವ ಮೊದಲು ಸದಸ್ಯರಿಗೆ ಮೂಲ ರಸೀದಿಯನ್ನು ಕೊಟ್ಟು ಕಾರ್ಬನ್ ಪ್ರತಿಯನ್ನು ನಾವು ಇಟ್ಟುಕೊಳ್ಳುತ್ತಿದ್ದೇವು ಎಂದರೆ ಸರಿ. ಯಾವುದೇ ಕಾರಣಕ್ಕೂ ಮೂಲ ರಸೀದಿ ನಮ್ಮ ಹತ್ತಿರ ಉಳಿಯುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ.

7. ನಿಪಿ.69 ಕಾರ್ಬನ್ ಕಾಪಿಯಾಗಿರುತ್ತದೆ. ಕಾರ್ಬನ್ ಕಾಪಿಯನ್ನು ಸಂಬಂದಿಸಿಂ ಕಚೇರಿಯಲ್ಲಿ ದೃಡೀಕೃತ ಮಾಡಿಕೊಡುತ್ತಾರಾ ಎಂದರೆ ಕೊಟ್ಟಿರಬಹುದು ಎಂದು ಹೇಳುತ್ತಾರೆ. ಈಗ ನಾನು ನೋಡುತ್ತಿರುವ ಇನ್ನೊಂದು ದಾಖಲೆ ಸಹ ನಿಪಿ.69 ರ ದಾಖಲೆಯಾಗಿದ್ದು ಅದು ನಿಪಿ.69 ಮತ್ತು ಸದರಿ ದಾಖಲೆ ಒಂದೇ ಆಗಿರುತ್ತವೆ ಎಂದರೆ ಸರಿ. ನಿಪಿ.69 ರಸೀದಿ ಕೆಳಗಡೆ ಕನ್ನಡದಲ್ಲಿ ಸೆಕ್ರೆಟರಿ ಎಂದು ಇದ್ದು ಇನ್ನೊಂದು ದಾಖಲೆಯಲ್ಲಿ ಸೆಕ್ರೆಟರಿ ಎಂದು ಇಂಗ್ಲೀಷ್ ನಲ್ಲಿದೆ ಎಂದರೆ ಅದನ್ನು ನಾವು ಕೊಟ್ಟಿಲ್ಲ. ಸಾಕ್ಷಿ ಸ್ವತಃ ಏನು ಬೇಕಾದರೂ ಮ್ಯಾನಿಪೂಲೇಷನ್ ಆಗುತ್ತದೆ ಎಂದು ಹೇಳುತ್ತಾರೆ. ಈಗ ನಾನು ನೋಡುತ್ತಿರುವ ದಾಖಲೆ ಈಗಾಗಲೇ ಸಾಕ್ಷಿ ಗುರುತಿಸಿದ್ದ ದಾಖಲೆಯಾಗಿದ್ದು ಅದನ್ನು ನಿಪಿ.70 ಎಂದು ಗುರುತಿಸಲಾಯಿತು. ನಿಪಿ.70 ಮತ್ತು ನಿಪಿ.69 ಒಂದೇ ದಾಖಲೆಯಾಗಿದ್ದು ನಿಪಿ.70 ನ್ನು ಯಾರು ನೀಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಿಪಿ.69 ನ್ನು ದೂರುದಾರರು ಹಾಜರುಪಡಿಸಿರುತ್ತಾರೆ, ನಿಪಿ.70 ನ್ನು ಈ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ಈ ರೀತಿ ನಾವು ಮ್ಯಾನಿಪುಲೇಷನ್ ಮಾಡಿ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ. ಈಗ ಗುರುತಿಸಲಾದ ನಿಪಿ.70 ನ್ನು ನಾವು 9 ನೇ ಎಸಿಎಂಎಂ ನ್ಯಾಯಾಲಯದಲ್ಲಿ ಸಿಸಿನಂ.12771/2021 ರಲ್ಲಿ ನಿಪಿ.3 ಅಂತೆ ಗುರುತಿಸಿಕೊಂಡಿದ್ದೇವೆ ಎಂದರೆ ನನಗೆ ಗೊತ್ತಿಲ್ಲ.

8. ನಾನು ಈ ಪ್ರಕರಣದಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ನಿಪಿ.15 ರಂತೆ ಅಧ್ಯಕ್ಷರಿಗೆ ಮತ್ತು ಸೆಕ್ರೆಟರಿ ರವರಿಗೆ ದಿ08.03.2006 ರಂದು ನೋಟಿಸಸ್ ಕೊಟ್ಟಿರುತ್ತೇನೆ, ಸದರಿ ನೋಟಿಸ್ ಗಳನ್ನು ನಿಪಿ.17 ಮತ್ತು 18 ರ ಪ್ರಕಾರ ಸ್ವೀಕೃತ ಮಾಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನೋಟಿಸ್ ನಲ್ಲಿ ನನ್ನ ಹೆಸರು ಇರುತ್ತದೆ. ನಿಪಿ.17 ಮತ್ತು 18 ನಾನೇ ಸ್ವೀಕರಿಸಿದ್ದು ಎನ್ನುವುದು ಸರಿ.

9. ನಿಪಿ.14 ರಲ್ಲಿರುವ ಸಹಿ ಮರಿಯಪ್ಪ ನವರ ಸಹಿ ಎಂದರೆ ಸರಿ. ಅದನ್ನು ಮರಿಯಪ್ಪ ನವರು ದೂರುದಾರರಿಗೆ ಕೊಟ್ಟಿದ್ದು ಎಂದರೆ ಸರಿ. ಸೀತಾರಾಮ ರವರು ವಕೀಲರಾಗಿದ್ದರಿಂದ ಅವರು ನಾವು ಮಾಡುವ ಅವ್ಯವಹಾರವನ್ನು ಪ್ರಶ್ನೆ ಮಾಡುತ್ತಿದ್ದರು ಅಂತ ಅವರು ಸೊಸೈಟಿಯ ಸದಸ್ಯರಲ್ಲ ಎಂದು ಅಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವರು ಈ ಪ್ರಕರಣ ದಾಖಲು ಮಾಡುವಾಗ ಇನ್ನೂ ವಕೀಲರಾಗಿರಲಿಲ್ಲ. ಸೀತಾರಾಮರವರು ನಮ್ಮ ಅವ್ಯವಹಾರದ ವಿರುದ್ದ ಹೋರಾಡುತ್ತಾ ಬಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

10. ಸೀತಾರಾಮ ರವರು ನಮ್ಮ ಸೊಸೈಟಿಯ ಸದಸ್ಯರಲ್ಲ ಎಂದು ಎಆರ್ ಸಿ ಎಸ್ ರವರಿಗೆ ಅರ್ಜಿ ಕೊಟ್ಟಿರುತ್ತೇನೆ. ಸಾಮಾನ್ಯ ಸಭೆಯನ್ನು ಪ್ರತಿ ವರ್ಷ ನಡೆಸುತ್ತಿದ್ದೇವು ಯಾವುದಾದರೂ ಸಭೆಯಲ್ಲಿ ದೂರುದಾರರು ಸದಸ್ಯರಲ್ಲ ಅಂತ ಠರಾವು ಮೂಲಕ ತಿಳಿಸಿದ್ದೀರಾ ಎಂದರೆ ಸಾಕ್ಷಿ ತಿಳಿಸಿರಬಹುದು ನನಗೆ ಗೊತ್ತಿಲ್ಲ. ಅದಂನ್ನು ನ್ಯಾಯೂಲಯಕ್ಕೆ ಕೊಟ್ಟಿದ್ದೀರಾ ಎಂದೆರ ಸಾಕ್ಷಿ ಅದನ್ನು ನಾನು ಯೂಕೆ ಕೊಡಲಿ ಎಂದು ಸಾಕ್ಷಿ ನುಡಿಯುತ್ತಾರೆ. ಸೊಸೈಟಿಯಲ್ಲಿ ಎಲ್ಲಾ ಹಳೆಯ ದಾಖಲೆಗಳನ್ನು ಇಟ್ಟಿರುತ್ತೀರಾ ಎಂದರೆ ಸಾಕ್ಷಿ ನಾನು ಅಲ್ಲಿ ಈಗ ಕೆಲಸ ಮಾಡುವುದಿಲ್ಲ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಆ ದಾಖಲಾತಿಗಳನ್ನು ಅರ್ಜಿ ಮೂಲಕ ತರಿಸಿದರೆ ನಮ್ಮದು ಯಾವುದೇ ತಕರಾರು ಇಲ್ಲ. ದೂರುದಾರರಿಗೆ ನಿವೇಶನ ಕೊಡಬಾರದು ಎಂದು ಸೊಸೈಟಿಯಲ್ಲಿ ತೀರ್ಮಾನ ಮಾಡಿದ್ದೇವೆ ಎಂದು ಹೇಳಿದ್ದು ಆ ಕುರಿತು ದಾಖಲೆ ಕೊಟ್ಟಿಲ್ಲ. ಯಾವ ದಿನಾಂಕದಂದು ತೀರ್ಮಾನ ಮಾಡಿದ್ದೇವೆ ಎಂದು ನನಗೆ ಗೊತ್ತಿಲ್ಲ. ಆ ರೀತಿ ತೀರ್ಮಾನ ತೆಗೆದುಕೊಂಡಾಗ ಒಂದು ಪ್ರತಿಯನ್ನು ಎಆರ್ ಸಿಎಸ್ ರವರಿಗೆ ಕಳುಹಿಸುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ಯಾವ ಯಾವ ದಾಖಲೆಗಳನ್ನು ದೂರುದಾರರು ಸೃಷ್ಟಿಸುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ದಾಖಲೆಗಳನ್ನು ನಾವು ನ್ಯಾಯಾಲಯಕ್ಕೆ ಕೊಟ್ಟಿದೇಃವೆ. ನಾವು ಏನೇ ದಾಖಲೆ ಕೊಟ್ಟರು ಸೀತಾರಾಮರವರ ವಿರುದ್ದ ಆದೇಶ ಮಾಡಿಸಿಕೊಳ್ಳುತ್ತಿದ್ದೇವು ಎಂದರೆ ಸರಿಯಲ್ಲ. ಈ ಕುರಿತು ಸೀತಾರಾಮ ರವರು ನಮ್ಮ ವಿರುದ್ದ ಹೈ ಕೋರ್ಟ್ ನಲ್ಲಿ ರಿಟ್ ಸಲ್ಲಿಸಿರುವುದು ನನಗೆ ಗೊತ್ತಿಲ್ಲ.

11. ನಿಪಿ.11 ರಕ್ಕೆ ಸಂಬಂದಿಸಿದಂತೆ ನಮ್ಮ ಕಚೇರಿಯಲ್ಲಿ ಉಲ್ಲೇಖ ಇರುವುದಿಲ್ಲ. ಆ ರೀತಿ ದಾಖಲೆ ನ್ಯಾಯಾಲಯಕ್ಕೆ ಕೊಡಲು ಆಗುವುದಿಲ್ಲ. ದಾಖಲೆ ಕೊಟ್ಟರೆ ನಮ್ಮ ವಿರುದ್ದ ಆದೇಶ ಆಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.11 ಕ್ಕೆ ಯಾರು ಸಹಿ ಮಾಡಿರುತ್ತಾರೆ ಎಂದು ಗೊತ್ತಿಲ್ಲ. ನಿಪಿ.11 ರಲ್ಲಿ ರಾಮ್ ದಾಸ್ ಎನ್ನುವವರ ಹೆಸರು ಇರುತ್ತದೆ. ದಿ.15.10.1990 ರಿಂದ ಇಲ್ಲಿಯ ವರೆಗೆ ರಾಮ್ ದಾಸ್ ರವರು ಸಂಬಂದಪಟ್ಟಿಲ್ಲದೇ ರವರಿಗೆ ರಸೀದಿ ಕೊಟ್ಟಿರುತ್ತಾರೆ ಎಂದು ಕಲಂ.70 ರ ಅಡಿಯಲ್ಲಿ ದೂರು ಕೊಟ್ಟಿರುತ್ತೀರಾ ಎಂದರೆ ಕೊಟ್ಟಿಲ್ಲ. ಸಾಕ್ಷಿ ಸ್ವತಃ ಅವರು ಅದನ್ನು ನಾನು ಕೊಟ್ಟಿಲ್ಲ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ನಾವೇ ಕೊಟ್ಟಿದ್ದರು ಸಹ ಕೊಟ್ಟಿಲ್ಲ ಎಂದು ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ನಿಪಿ.11 ನೀಡಿದವರ ವಿರುದ್ದ ಯಾವುದೇ ಕ್ರಮ ಕೈಗೊಂಡಿಲ್ಲ. ರಾಮ್ ದಾಸ್ ರವರಿಗೆ 2018 ರಲ್ಲಿ ಎಷ್ಟು ವರ್ಷ ವಯಸ್ಸಾಗಿತ್ತು ಎಂದು ನನಗೆ ಗೊತ್ತಿಲ್ಲ. ಅವರು ಬದುಕಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ರಾಮ್ ದಾಸ್ ರವರನ್ನು ನಾನು ಸಾಕ್ಷಿ ಮಾಡಿಸುವುದಿಲ್ಲ. 2018 ರಲ್ಲಿ ರಾಮದಾಸ್

ರವರು ಪತ್ರ ಕೊಟ್ಟಿರುತ್ತಾರೆ ಎಂದು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ರಾಮ ದಾಸ್ ರವರು ಇದೇ ನ್ಯಾಯಾಲಯದದಲ್ಲಿ ದೂರು ಸಲ್ಲಿಸಿದ್ದರು ಎಂದರೆ ಸರಿ. ಅದರಲ್ಲಿ ನಾವು ಜಾಮೀನು ತೆಗೆದುಕೊಂಡಿರುತ್ತೇವೆ ಎಂದರೆ ಸರಿ. ರಾಮ್ ದಾಸ್ ರವರು ಗ್ರಾಹಕರ ನ್ಯಾಯಾಲಯದಲ್ಲಿಯೂ ಸಹ ಪ್ರಕರಣ ದಾಖಲಿಸಿದ್ದರು ಎನ್ನುವುದು ಸರಿಯಲ್ಲ. ರಾಮ್ ದಾಸ್ ರವರು ಇದೇ ಪ್ರಕರಣದಲ್ಲಿ ನಮ್ಮ ವಿರುದ್ದ ಸಾಕ್ಷಿ ಹೇಳಿರುತ್ತಾರೆ ಎಂದರೆ ಸರಿ. 2018 ರಲ್ಲಿ ರಾಮ್ ದಾಸ್ ರವರಿಗೆ 74 ವರ್ಷ ವಯಸ್ಸಾಗಿತ್ತು ಈಗ ಅಂದಾಜು 90 ವರ್ಷ ವಯಸ್ಸಾಗಿರಬಹುದು ದಿ.01.04.2018 ಕ್ಕೆ ಅವರು ಬರೆಯುವ ಸ್ಥಿತಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆ ರಾಮದಾಸ್ ರವರ ಕೊಟ್ಟ ದಾಖಲೆ ಅಲ್ಲ ಎಂದರೆ ಸರಿಯಲ್ಲ. ನಾನು ಈಕೇಸಿನಿಂದ ತಪ್ಪಿಸಿಕೊಳ್ಳಬೇಕು ಅಂತ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**